## ಕಲಾತ್ಮಕ ಕನ್ನಡಕ ಮುಖ

ಮನುಷ್ಯನಿಗೆ ವಯಸ್ಸು ನಲುವತ್ತು ಆಯ್ತು ಅಂದರೆ ಚಾಳೀಸ್ ಎಂದೇ ಕರೆಯುವ ವಾಡಿಕೆ. ಅದಕ್ಕೆ ಸರಿಯಾಗಿ ಮುಖಕ್ಕೊಂದು ಕನ್ನಡಕ ಬಂತು ಅಂತಲೇ ತಿಳ್ಕೋಬೇಕು. ಕೆಲವರದು ಫ್ಯಾಷನ್‌ಗೋಸ್ಕರವಾದರೆ ಮತ್ತೆ ಕೆಲವರದು ಕಾಣದ ಕಡಲು!

ಅವರವರ ದೃಷ್ಟಿ ದೋಷಕ್ಕನುಗುಣವಾಗಿ ಬೇರೆ ಬೇರೆ ಅಂಕೆಯ ಕನ್ನಡಕ ಧರಿಸಲು ವೈದ್ಯರು ಸಲಹೆ ನೀಡುತ್ತಾರೆ. ಆಮೇಲೆ ಕನ್ನಡಕ ಒಂದು ಉಪಯುಕ್ತ ಆಭರಣವಾಗುತ್ತದೆ. ಕನ್ನಡಕ ಧರಿಸದೆ ಇರುವಾಗ ಮನೆಯಲ್ಲಿ ನಿರ್ದಿಷ್ಟ ಜಾಗದಲ್ಲಿ ಇರಿಸಬೇಕಾಗುತ್ತದೆ. ಇಲ್ಲಾಂದ್ರೆ ಅದನ್ನು ಹುಡುಕುವುದಕ್ಕೆ ಇನ್ನೊಂದು ಕನ್ನಡಕ ಬೇಕಾಗಬಹುದು. ಇತ್ತೀಚೆಗೆ ಮೈಸೂರಿನ ಮನೆಯೊಂದರಲ್ಲಿ ಕನ್ನಡಕ ಇಡಲೆಂದೇ ಇರಿಸಿದ ಸ್ಟ್ಯಾಂಡ್ ಕಾಣಿಸಿದ್ದು ಹೀಗೆ! ತುಂಬಾ ಕಲಾತ್ಮಕವಾದ ಕನ್ನಡಕ ಮುಖ ಮರದಲ್ಲಿ ಸುಲಭವಾಗಿ ತಯಾರಿಸಬಹುದಾಗಿದೆ.

–ಜೀವನ್ ಶೆಟ್ಟಿ



## ಮೊಟ್ಟೆ ಸಂಪಿಗೆ!

ಮೊಟ್ಟೆ ಸಂಪಿಗೆ ಎಂದೇ ಹೆಸರು ವಾಸಿಯಾಗಿರುವ ಸಂಪಿಗೆ ಹೂವಿನ ಜಾತಿಗೆ ಸೇರಿದ ಈ ಹೂವು ವರ್ಷದ ಎಲ್ಲ ಕಾಲದಲ್ಲೂ ಅರಳುತ್ತದೆ. ವೈಜ್ಞಾನಿಕವಾಗಿ ಮ್ಯಾಗ್ನೋಲಿಯಾ ಚಂಪಕ ಎಂದು ಕರೆಸಿಕೊಳ್ಳುವ ಮೊಟ್ಟೆ ಸಂಪಿಗೆಯಲ್ಲಿ 2 ವಿಧ. ಒಂದು ಬಿಳಿ ಮತ್ತೊಂದು ಹಳದಿ ಬಣ್ಣದ್ದು. ಬಿಳಿ ಬಣ್ಣದ ಮೊಟ್ಟೆ ಸಂಪಿಗೆ ಚಂದ್ರನ ಬೆಳಕಿನಲ್ಲಿ ಅರಳಿದರೆ ಹಳದಿ ಬಣ್ಣದ ಮೊಟ್ಟೆ ಸಂಪಿಗೆ ಸೂರ್ಯನ ಬೆಳಕಿನಲ್ಲಿ ಅರಳುತ್ತದೆ. ಈ ಮೊಟ್ಟೆ ಸಂಪಿಗೆ ಮರವು ನಮ್ಮ ಅಮ್ಮನ ಮನೆಯ ಹೂದೋಟದಲ್ಲಿದ್ದು ಹೂವು ಅರಳಿದಾಗ ಅದರ ಘಮವು ಮನಸ್ಸಿಗೆ ಅಹ್ಲಾದವನ್ನು ನೀಡುವುದಂತೂ ಸತ್ಯ.

–ಸಂಜ್ಞಾ ಪಿ. ಭಟ್ಟ, ಶಿರಸಿ



## ಕಂಬಳಿಹುಳುಗಳ ಪಾರ್ಕಿಂಗ್ ಲಾಟ್

ಮರದ ನೆರಳಲ್ಲಿ ದಪ್ಪನಾದ ಹಾವೊಂದು ನಿಧಾನವಾಗಿ ಮರ ಏರುತ್ತಿರುವಂತೆ ತೋರಿತು. ಹತ್ತಿರ ಹೋಗಿ ನೋಡಿದರೆ ಕಂಬಳಿ ಹುಳುಗಳು ಸಾಲಾಗಿ ಗುಂಪಿನಲ್ಲಿ ಮರ ಏರುತ್ತಿವೆ. ಒಂದಷ್ಟು ಎತ್ತರ ಏರಿದೊಡನೆ ಮುಂದೆ ಇದ್ದಂತವು ಒಂದರ ಪಕ್ಕ ಒಂದು ನಿಲ್ಲಲಾರಂಭಿಸಿದವು. ಅದೂ ಪಾರ್ಕಿಂಗ್‌ಗೆ ಜಾಗ ಕಡಿಮೆ ಇದ್ದಲ್ಲಿ ಹೆಚ್ಚು ವಾಹನಗಳಿಗಾಗಲಿ ಎಂದು ಒತ್ತೊತ್ತಾಗಿ ವಾಹನಗಳನ್ನು ನಿಲ್ಲಿಸುವಂತೆ ಶಿಸ್ತಿನಿಂದ ಪ್ಯಾಕ್‌ಅಪ್ ಆಗಲಾರಂಭಿಸಿದವು! ತಮ್ಮನ್ನು ಹುಡುಕಿ ತಿನ್ನುವ ಪಕ್ಷಿ ಮತ್ತಿತರ ಜೀವಿಗಳಿಂದ ರಕ್ಷಿಸಿಕೊಳ್ಳಲು ಈ ಉಪಾಯವಂತೆ!

–ಪೂರ್ಣೇಶ್ ಮತ್ತಾವರ, ಮೂಡಿಗೆರೆ

